<u>ಅಸಲು ದಾವಾ ಸಂಖ್ಯೆ**207/2021**</u> ಡಿ.ಡಬ್ಲ್ಯೂ:- **1**

ದಿನಾಂಕಃ **26.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ಸಾಕ್ಷಿಗೆ ಸರ್ವೆ ನಂಬರ್ 4 ರಲ್ಲಿ ನಿಮಗೆ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿಯು 2 ಎಕರೆ 10 ಗುಂಟೆ ಜಮೀನು ನಮಗೆ ಸೇರಿದ್ದಾಗಿದೆ. ಪ್ರಸ್ತುತ ಸರ್ವೆ ನಂಬರ್ 4 ರ , ರೀ ಸರ್ವೆ ನಂಬರ್ 4/21 ಎಂದರೆ ಸರಿ . ಸರ್ವೆ ನಂಬರ್ 4 ರ ಆಸ್ತಿ ಮೂಲತಃ ಭೀಮಾಚಾರ್ಯ ಬಿನ್ ಗುರುರಾಯಚಾರ್ಯ ರವರಿಗೆ ಸೇರಿದ್ದು ಎಂದರೆ ಗೊತ್ತಿಲ್ಲ. 1955-56 ನೇ ಸಾಲಿನಲ್ಲಿ ಭೀಮಚಾರ್‌ಯರವರು ಸರ್ವೆ ನಂಬರ್ 4 ರ ಆಸ್ತಿಯನ್ನು ಬಸಪ್ಪ ಬಿನ್ ಗಿರಿಯಜ್ಜಿ ಮಲ್ಲಪ್ಪ ಎಂಬುವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ . ಬಸಪ್ಪ ಬಿನ್ ಗಿರಿಯಜ್ಜಿ ಮಲ್ಲಪ್ಪ ಎಂದರೆ ವಾದಿಯ ತಂದೆ ಎಂದರೆ ಸರಿ. ರಾಮಪ್ಪ ತಂದೆ ಮಂಗನಕೊಪ್ಪ ತಿರ್ಥಪ್ಪ ನನ್ನ ಅಜ್ಜ ಎಂದರೆ ಸರಿ . ಬಸಪ್ಪ ರವರು ರಾಮಪ್ಪರವರಿಗೆ 1956-57 ನೇ ಸಾಲಿನಲ್ಲಿ ಸರ್ವೆ ನಂಬರ್ 4 ಆಸ್ತಿ ಮಾರಾಟ ಮಾಡಿದಾದರೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನಾನು ನೋಡಿರುತ್ತೇನೆ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ.2 ರ ದಾಖಲೆಯಲ್ಲಿ ಬಸಪ್ಪರವರು ತಮ್ಮ ಬಳಿ ಪೂರ್ವದ ದಿಕ್ಕಿಗೆ 37 ವರೆ ಅಡಿಯನ್ನು ಇಟ್ಟು ಕೊಂಡು ಉಳಿದ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದು ನಮೂದಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು 2 ಎಕರೆ 10 ಗುಂಟೆ ಜಮೀನಿಗೆ ನೋಂದಣಿ ಮಾಡಿಸಿದ್ದಾರೆಂದು ನುಡಿಯುತ್ತಾರೆ. ನಿಪಿ.2 ರ ಪ್ರಕಾರ ಬಸಪ್ಪರವರು 2 ವರೆ ಗುಂಟೆ ಜಮೀನನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆಂದರೆ ಸರಿಯಲ್ಲ. ಸದರಿ 2 ವರೆ ಗುಂಟೆ ಜಮೀನಿನಲ್ಲಿ ವಾದಿ ಸ್ವಾದೀನನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಕಣ್ಣು ತಪ್ಪಿನಿಂದಾಗ 2 ಎಕರೆ 10 ಗುಂಟೆ ಜಮೀನು ನಿಮ್ಮ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. 2013-14 ನೇ ಸಾಲಿನಲ್ಲಿ ವಾದಿಯು ದಾವ ಆಸ್ತಿಗೆ ಸಂಬಂಧಿಸಿದಂತೆ ಹೊನ್ನಾಳಿ ಉಪವಿಭಾಗಧಿಕಾರಿಗಳ ನ್ಯಾಯಾಲಕ್ಕೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಗೊಂಡಿರುತ್ತದೆ ಎಂದರೆ ಸರಿ. ನಮ್ಮ ಅಜ್ಜ ರಾಮಪ್ಪರವರು ಮೇಲ್ಕಂಡ 2 ವರೆ ಗುಂಟೆ ಜಮೀನನ್ನು ಬಸಪ್ಪರವರಿಂದ ಬಿಟ್ಟು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ 2 ವರೆ ಗುಂಟೆ ಜಮೀನನ್ನು ನಮ್ಮ ಅಜ್ಜ ರಾಮಪ್ಪರವರು ಖರೀದಿ ಮಾಡಿರುವುದಿಲ್ಲ ಮತ್ತು ಸದರಿ 2 ವರೆ ಗುಂಟೆ ಜಮೀನಿನಲ್ಲಿ ಈಗಲೂ ಸಹ ವಾದಿ ಸ್ವಾದೀನನುಭದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ 2 ವರೆ ಗುಂಟೆ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಮತ್ತು ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**